**ಓ ಎಸ್ ನಂ.68/15 ದಿಃ 04-02-2021. ಪಿ.ಡಬ್ಲ್ಯೂ.1**
**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ಃ- 3ನೇ ಪ್ರತಿವಾದಿಯ ಪರ**
**ಶ್ರೀ. ಹೆಚ್.ಎಲ್.ಆರ್.ಎಸ್.ಃ ವಕೀಲರಿಂದ ಃ-**

ನಾನು 4 ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ರಿಂದ 4ನೇ ತರಗತಿವರೆಗೆ ಒಂದೇ ಶಾಲೆಯಲ್ಲಿ ಓದಿರುತ್ತೇನೆ. ನಾನು ನನ್ನ ಮದುವೆಗೂ ಮುಂಚೆ ಬೆಂಗಳೂರಿನ ಗೊರಗುಂಟೆಪಾಳ್ಯದಲ್ಲಿ ವಾಸವಾಗಿದ್ದೆ. ನಾನು ಮದುವೆಗೂ ಮುಂಚೆ ಬೆಂಗಳೂರನ್ನು ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ ವಾಸವಾಗಿಲ್ಲ. ನಾನು ಮದುವೆಯೊದ ನಂತರ ಮಸಿಯಮ್ಮನಹಟ್ಟಿಯಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ತಂದೆಯ ಹೆಸರು ಹನುಮಂತಯ್ಯ. ನನ್ನ ಗಂಡ ಗಿಡಗ ಗ್ರಾಮದಲ್ಲಿ ಎಂದಿಗೂ ವಾಸವಾಗಿಲ್ಲ. ನನ್ನ ಗಂಡನಿಗೆ ಸದರಿ ಗ್ರಾಮದಲ್ಲಿ ಯಾವುದೇ ನಿವೇಶನ ಇಲ್ಲ. ದಿಃ 29.07.2010 ರಂದು ರೇಣುಕಮ್ಮ ಕೋಂ ಕೆಂಪೇಗೌಡರಿಂದ ನನ್ನ ಗಂಡ ಸದರಿ ಗಿಡಗ ಗ್ರಾಮದಲ್ಲಿ ಒಂದು ಮನೆ ಅಥವಾ ನಿವೇಶನವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಕುಟುಂಬದೊಂದಿಗೆ ಸದರಿ ಮನೆಯಲ್ಲಿ ನಾನು ವಾಸವಾಗಿದ್ದೆ ಎಂದರೆ ಸರಿಯಲ್ಲ. ನನ್ನನ್ನು ವಿಶಾಲಾಕ್ಷಿ ಎಂದೂ ಸಹ ಕರೆಯುತ್ತಾರೆ ಎಂದರೆ ಸರಿ. ದಿಃ 11.04.2012 ರಂದು ನಾನು ಮತ್ತು ನನ್ನ ಗಂಡ ಸೇರಿ ಸದರಿ ಮನೆಯನ್ನು ಬಿ.ಆರ್.ನಂದೀಶ್ ಎನ್ನುವವರಿಗೆ ಮಾರಾಟ ಮಾಡಿದ್ದೆವು ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಮಕ್ಕಳು. ಅವರೆಂದರೆ ಐಶ್ವರ್ಯ ಮತ್ತು ದಿವ್ಯ. ನನ್ನ ತಾಯಿ ಸುಮಾರು 12 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ತಾಯಿ ಮಸಿಯಮ್ಮನ ಹಟ್ಟಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ ಸಕ್ಕರೆ ಖಾಯಿಲೆಯಿಂದ ಬಳಲುತ್ತಿದ್ದಳು. ನನ್ನ ತಾಯಿಯ ಮರಣ ಪ್ರಮಾಣಪತ್ರವನ್ನು ನಾನು ನ್ಯಾಯಾಲಯಕ್ಕೆ

ಹಾಜರುಪಡಿಸಿಲ್ಲ. ನನ್ನ ತಾಯಿ ಗಿಡಗ ಗ್ರಾಮದಲ್ಲಿ ಆತ್ಮಹತ್ಯೆ ಮಾಡಿಕೊಂಡು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ದೂರು ಸಹ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. ದಾವಾಆಸ್ತಿಯು ಮೂಲತಃ ಗೊರವಯ್ಯನಿಗೆ ಸೇರಿದ್ದು ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**ಓ ಹೇಳಿ ಕೇಳಿ ಸರಿ ಇದೆ.**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ನ್ಯಾಯಾಲಯ, ಗುಬ್ಬಿ**